
ವಹಿಸುತ್ತವೆ. ಸಂಸಾರವೆಂಬ ನದಿಯನ್ನು ದಾಟಲಾಗದೆ ಒದ್ದಾಡುವ ಜೀವಿಯು ತುಂಬುಪ್ರವಾಹವನ್ನು ಕಂಡು, 'ಅಯ್ಯೋ!' ಎಂದು ಉದ್ಗರಿಸುತ್ತಾನೆ. ಆಗ ಮೂಡಿಬಂದ ಅಂಬಿಗನು, 'ಭಯಪಡಬೇಡ, ನನ್ನ ದೋಣಿಯನ್ನೇರು; ದಡ ಸೇರಿಸುತ್ತೇನೆ' ಎಂದು ಭರವಸೆ ನೀಡುತ್ತಾನೆ. ಸೆಳೆ, ಪ್ರವಾಹ, ಸುಳಿ, ಬಿರುಗಾಳಿ ಏನಿದ್ದರೂ ಯಾತ್ರಿಕನನ್ನು ದಡಸೇರಿಸುವುದು ಅಂಬಿಗನ ಜವಾಬ್ದಾರಿ. ಅಂತೆಯೇ ಶಾಸ್ತ್ರಗಳು ನಿರೂಪಿಸುವ ಸಾಧನಾಕ್ರಮವು ಇನ್ನೊಂದು ದಡದಲ್ಲಿ ಕಾದಿರುವ ಭಗವಂತನ ಬಳಿಗೆ ಜೀವಿಯನ್ನು ಕರೆದೊಯ್ಯುವುದು ಮಾತ್ರ.

ಭಗವಂತನ ವಾಣಿ ಹಾಗೂ ಭಗವಂತ ಎರಡೂ ಒಂದೇ ಎನ್ನುತ್ತಾರೆ. ಒಬ್ಬನ ಮಾತಿಗೂ ಅವನ ವ್ಯಕ್ತಿತ್ವಕ್ಕೂ ಯಾವುದೇ ವ್ಯತ್ಯಾಸವಿಲ್ಲ. ಅದೇ ರೀತಿ, ಭಗವಂತನ ಮಾತಿನ ಎಳೆಯನ್ನು ಹಿಡಿದುಕೊಂಡು ಅವನನ್ನೇ ಸೇರಬಹುದು ಎನ್ನುತ್ತಾರೆ. ಶ್ರೀರಾಮಕೃಷ್ಣರು ಹೇಳುವಂತೆ, 'ಭಾಗವತ, ಭಕ್ತ, ಭಗವಾನ್– ಮೂವರೂ ಒಂದೇ.' ಅಂತಿಮವಾಗಿ ಜೀವಾತ್ಮ – ಪರಮಾತ್ಮ ಎರಡೂ ಒಂದೇ; ಅದರ ನಡುವೆ ಭಗವಂತನ ಮಾತು ಬರುತ್ತದೆ; ಅದು ಜೀವಾತ್ಮ–ಪರಮಾತ್ಮ ಎರಡರ ಭೇದವನ್ನು ಅಳಿಸಿಹಾಕುತ್ತದೆ. ಆದ್ದರಿಂದ ಅದೂ ದಿವ್ಯವೇ; ಭಗವಂತನಿಂದ ಹೊರಹೊಮ್ಮಿದ್ದರಿಂದ ಗುರುವಿನ ಪಾತ್ರವನ್ನು ವಹಿಸಿದಂತಾಯಿತು. ಹೀಗೆ ಶಾಸ್ತ್ರಗ್ರಂಥಗಳು ಕೇವಲ ಗ್ರಂಥವಾಗಿ ಉಳಿಯದೆ, ಭಕ್ತ ಮತ್ತು ಭಗವಂತನ ನಡುವಿನ ಮಧ್ಯವರ್ತಿಯಾಗಿ ಮಹತ್ವದ ಪಾತ್ರ ವಹಿಸುತ್ತದೆ.

ಅನೇಕ ಮಂದಿ ಸಾಧು–ಸಂತರು ಯಾವಾಗಲೂ ತಮ್ಮ ಬಳಿ ದಿವ್ಯಗ್ರಂಥಗಳನ್ನು ಇಟ್ಟುಕೊಂಡಿದ್ದರು ಎಂಬುದಾಗಿ ನಮಗೆ ಹಲವು ನಿದರ್ಶನಗಳಿಂದ ತಿಳಿದುಬರುತ್ತದೆ. ಶ್ರೀರಾಮಕೃಷ್ಣರ ಬಳಿ ಯಾವಾಗಲೂ 'ಅಷ್ಟಾವಕ್ರ ಗೀತೆ', 'ಅಧ್ಯಾತ್ಮರಾಮಾಯಣ' ಗಳಿರುತ್ತಿದ್ದವು. ಸ್ವಾಮಿ ವಿವೇಕಾನಂದರು ತಮ್ಮ ಪರಿವ್ರಾಜಕ ದಿನಗಳಲ್ಲಿ ಗೀತೆ ಹಾಗೂ Imitation of Christ ಪುಸ್ತಕಗಳನ್ನು ಒಯ್ಯುತ್ತಿದ್ದರು. ಅನೇಕ ಮಂದಿ ವಿರಕ್ತ ಸಂನ್ಯಾಸಿಗಳು ತಮ್ಮೊಂದಿಗೆ ಗೀತೆ, ಉಪನಿಷತ್ ಅಥವಾ ಯಾವುದಾದರೊಂದು ತಮಗೆ ಪ್ರಿಯವಾದ ದಿವ್ಯಗ್ರಂಥವನ್ನು ಇಟ್ಟುಕೊಂಡಿರುತ್ತಾರೆ. ಪ್ರತಿನಿತ್ಯವೂ ಅದನ್ನೋದುವ, ಮನನ ಮಾಡುವ ಪರಿಪಾಠವನ್ನಿಟ್ಟುಕೊಂಡಿರುತ್ತಾರೆ. ಹೆಚ್ಚಾಗಿ ಈ ಕೃತಿಗಳು ಆಧ್ಯಾತ್ಮಿಕ ಸಾಧನೆಗೆ ಸಂಬಂಧಪಟ್ಟಿರುವ ಶ್ರೇಷ್ಠ ಕೃತಿಗಳೇ ಆಗಿರುತ್ತವೆ. 'ಸ್ವಾಧ್ಯಾಯ'ವೂ ಸಾಧನೆಯ ಒಂದು ಅಂಗವಾಗಿದೆ; ಅಧ್ಯಯನ ಮಾಡುವ ಗ್ರಂಥದ ವಿಷಯವೂ ಸಾಧನೆ – ಹೀಗೆ ಪರಸ್ಪರ ಪೂರಕವಾಗಿದ್ದುಕೊಂಡು, ಸಾಧಕನನ್ನು ನಿರಂತರ ಉನ್ನತ ಭಾವದಲ್ಲಿಡಲು ಸಹಾಯಕವಾಗುತ್ತವೆ.

ಆಧುನಿಕ ಯುಗದಲ್ಲೂ ಪ್ರಾಚೀನ ಕೃತಿಗಳ ಮಹತ್ವ ಕಡಿಮೆಯಾಗಿಲ್ಲ. ತಾಳೆಗರಿ, ಭೂರ್ಜಪತ್ರಗಳಲ್ಲಿ ಗ್ರಂಥಸಂರಕ್ಷಣೆ ಮಾಡುತ್ತಿದ್ದ ಕಾಲವೊಂದಿತ್ತು. 'ಸೂತ್ರ'ರೂಪದ ಸಾಧನೆಯ ಗ್ರಂಥಗಳನ್ನು ಸಂಪೂರ್ಣ ಕಂಠಪಾಠ ಮಾಡಿ ನೆನಪಿನಲ್ಲಿಡುವ ಸಂಪ್ರದಾಯ ಅತ್ಯಂತ ಪ್ರಾಚೀನ; ಈಗಲೂ ಈ ಪರಿಪಾಠವಿದೆ. ಆಧ್ಯಾತ್ಮಿಕ ಜೀವನದಲ್ಲಿ ಇದು ಅತ್ಯಂತ ಉಪಯುಕ್ತವಾದ ವಿಧಾನವಾಗಿದೆ. ಆದರೂ ಗ್ರಂಥರೂಪದಲ್ಲಿ ಉಪಲಬ್ಧವಿರುವ ಕೃತಿಯು ಆರಂಭಿಕ ಹಂತದಲ್ಲೂ, ಮುಂದಿನ ಹಂತಗಳಲ್ಲೂ ಸಾಧಕನಿಗೆ ಸಹಾಯ ಮಾಡುತ್ತದೆ. ಎಲ್ಲಿ ಗ್ರಂಥವು ಕೇವಲ 'ಗ್ರಂಥಿ'ಯಾಗುತ್ತದೋ, ಅಂದರೆ ಸಹಾಯಕವಾಗುವ ಬದಲು 'ಬಂಧನ'ವಾಗುತ್ತದೋ, ಆಗ ಅದರಿಂದ ಬಿಡಿಸಿಕೊಳ್ಳಬೇಕು ಎನ್ನುತ್ತಾರೆ ಶ್ರೀರಾಮಕೃಷ್ಣರು. ಗ್ರಂಥಕ್ಕೂ ಮಿತಿಯಿದೆ, ಅದೇ ಸರ್ವಸ್ವವಲ್ಲ; ಅದು ಮಾಹಿತಿ ನೀಡುವ, ದಾರಿ ತೋರಿಸುವ ಸೂಚಕ ಮಾತ್ರ; ಈ ಮಿತಿಯನ್ನು ಮೀರಿ ಅದಕ್ಕೆ ಮಹತ್ವ ನೀಡಿದರೆ ಅದರಿಂದಾಗುವ ಅನಾಹುತ ಅತ್ಯಂತ ಭಯನಕವಾದದ್ದು. ಧರ್ಮಗ್ರಂಥಗಳು ದಿವ್ಯತೆಯತ್ತ ದಾರಿ ತೋರಿಸುವುದಕ್ಕಾಗಿಯೇ ಇವೆ; ಆದರೆ ಮತಾಂಧತೆ, ಅಜ್ಞಾನ ಹಾಗೂ ಪೂರ್ವಾಗ್ರಹಗಳಿಂದ ಅದೇ ಗ್ರಂಥಗಳು ವಿನಾಶಕಾರಿಯಾಗಿ ಪರಿಣಮಿಸಿದ ಉದಾಹರಣೆಗಳೂ ನಮ್ಮಲ್ಲಿವೆ. ಆದರೆ ಇವು ಗ್ರಂಥಗಳ ಮಹತ್ವವನ್ನು ಕುಗ್ಗಿಸಲಾರವು. ಅಂಥ ದಿವ್ಯ ಬದುಕನ್ನು ನಡೆಸದಿದ್ದರೆ, ಅಷ್ಟು ಉನ್ನತವಾದ ಗ್ರಂಥಗಳನ್ನೇ ಹೀನಕೃತ್ಯಗಳಿಗೆ ಅಸ್ತ್ರವಾಗಿ ಬಳಸಿಕೊಂಡರೆ, ಅದಕ್ಕೆ ಮಾನವನ ನೀಚಪ್ರವೃತ್ತಿಯೇ ಕಾರಣವಲ್ಲವೆ? ದೈವೀವಾಣಿಯ ದಾಖಲಾತಿಯು ಮಾನವನ ಬದುಕಿಗೆ ದೊಡ್ಡ ಒಂದು ವರದಾನ. ಸಮಾಜಕ್ಕೆ, ರಾಜ್ಯ–ದೇಶ–ವಿಶ್ವಕ್ಕೆ ಅದು ನೀಡುವ ಬೆಳಕು ಅತ್ಯಂತ ಅಮೂಲ್ಯವಾದದ್ದು. ಶಾಂತಿ, ಸೌಹಾರ್ದ, ಸಹಬಾಳ್ವೆ, ಶ್ರದ್ಧೆ, ಭಕ್ತಿ , ಶರಣಾಗತಿ, ಸಾಕ್ಷಾತ್ಕಾರ, ಸತ್ಯಸಂಧತೆ, ಜ್ಞಾನೋಪಾಸನೆ, ಸಾಂಸ್ಕೃತಿಕ ಸಮೃದ್ಧಿ, ಪರಿಪೂರ್ಣ ಮಾನವತೆ – ಇಂಥ ಉನ್ನತ ಆದರ್ಶಗಳನ್ನೆಲ್ಲ ನಾವು ಆಧ್ಯಾತ್ಮಿಕ ಗ್ರಂಥಗಳಲ್ಲಿ ಕಾಣುತ್ತೇವೆ; ಸಂಘರ್ಷ ಹಾಗೂ ಕಲಹಗಳಿಗೆ ಪ್ರೇರಕವಾದ ಅಪಕ್ವ ವಿಚಾರಧಾರೆಗಳನ್ನಲ್ಲ. ತಾಳೆಗ್ರಂಥವಿರಲಿ, ಪುಸ್ತಕರೂಪದಲ್ಲಿರಲಿ, ಇಂದಿನ ಡಿಜಿಟಲ್ ಯುಗದ ನಾನಾ ಬಗೆಯ ಯಂತ್ರೀಕೃತ ಪುಸ್ತಕಗಳ (ಇ–ಬುಕ್) ಅಥವಾ 'ಶಾವ್ಯ' (ಕೇಳುವ) ರೂಪದಲ್ಲಿರಲಿ, ಅವುಗಳನ್ನು ಅರಿತುಕೊಳ್ಳಲು ನಮಗೆ ಕೆಲವು ಅರ್ಹತೆಗಳು ಇರಬೇಕು: ೧) ಅರಿತುಕೊಳ್ಳಲು ಅಗತ್ಯವಾದ ತೆರೆದ ಹೃದಯ ೨) ಕೃತಿಯ ಅಂತರಂಗವನ್ನು ಕಾಣಬಲ್ಲ ಬುದ್ಧಿಶಕ್ತಿ ಹಾಗೂ ಪ್ರಯತ್ನ ೩) ಅವುಗಳ ಮೇಲೆ ವಿಶೇಷ ಭಕ್ತಿ, ಗೌರವ ೪) ಅವುಗಳನ್ನು ಜೀವನದಲ್ಲಿ ಅಳವಡಿಸಿ, ನಮ್ಮ ಬದುಕನ್ನು ಉನ್ನತ ನೆಲೆಗೆ ಕೊಂಡೊಯ್ಯಬಲ್ಲ ಪ್ರಾಯೋಗಿಕ ಮನಸ್ಸು.

ಈ ಎಲ್ಲ ಸಿದ್ಧತೆಗಳೊಂದಿಗೆ ಗ್ರಂಥಾರಾಧನೆ ನಡೆಸಿದಲ್ಲಿ, ಗ್ರಂಥ ನಮ್ಮನ್ನು ದಿವ್ಯನೆಲೆಯ ಧಾಮಕ್ಕೆ ಕೊಂಡೊಯ್ಯುವುದರಲ್ಲಿ ಸಂದೇಹವಿಲ್ಲ. ಆಗ ಅದು ನಮ್ಮನ್ನು ಸಲಹುವ 'ಮಾತೆ'ಯಾಗುತ್ತದೆ; ಗುರುತರ ಜವಾಬ್ದಾರಿಯಿಂದ ನಮ್ಮನ್ನು ಭಗವಂತನೆಡೆಗೆ ಕರೆದೊಯ್ಯುವ 'ಗುರು'ವಾಗುತ್ತದೆ. ✤




# ಆಧ್ಯಾತ್ಮಿಕ ಗ್ರಂಥಗಳು ಮತ್ತು ಅಧ್ಯಾತ್ಮ

(ಸಂಕಲನ)

**ಸ್ವಾಮಿ ವಿವೇಕಾನಂದ**

ಪ್ರಪಂಚದ ವಿವಿಧ ಧರ್ಮಗಳನ್ನು ನಾವು ವಿಶ್ಲೇಷಣೆ ಮಾಡಿದರೆ, ಅವನ್ನು ಎರಡು ವಿಧವಾಗಿ ವಿಂಗಡಿಸಬಹುದು: ಒಂದು ಧರ್ಮಗ್ರಂಥಗಳನ್ನುಳ್ಳದ್ದು, ಮತ್ತೊಂದು ಇಲ್ಲದೆ ಇರುವುದು. ಯಾವುದಕ್ಕೆ ಧರ್ಮಗ್ರಂಥವಿರುವುದೋ ಅದೇ ಅತ್ಯಂತ ಶಕ್ತಿಯುತವಾದದ್ದು ಮತ್ತು ಅದೇ ಹೆಚ್ಚು ಅನುಯಾಯಿಗಳನ್ನು ಹೊಂದಿರುವುದು. ಧರ್ಮಗ್ರಂಥಗಳು ಇಲ್ಲದೆ ಇರುವ ಧರ್ಮಗಳು ಬಹುಪಾಲು ಅಳಿದುಹೋಗಿವೆ. ಅವುಗಳಲ್ಲಿ ಹೊಸದಾಗಿರುವ ಕೆಲವಕ್ಕೆ ಇರುವ ಅನುಯಾಯಿಗಳು ಬಹಳ ಕಡಿಮೆ. ಆದರೂ ಇವೆಲ್ಲದರಲ್ಲಿಯೂ ನಮಗೆ ಒಂದು ಏಕಾಭಿಪ್ರಾಯ ಕಂಡುಬರುತ್ತದೆ. ಅದಾವುದೆಂದರೆ ಅವುಗಳು ಬೋಧಿಸುವ ಸತ್ಯಗಳು ನಿರ್ದಿಷ್ಟ ವ್ಯಕ್ತಿಗಳಿಗಾದ ಅನುಭವಗಳ ಫಲ – ಎಂಬುದು.. ಶಾಸ್ತ್ರದಲ್ಲಿ ಬರುವ ಋಷಿಗಳು ಕೆಲವು ಸತ್ಯಗಳನ್ನು ತಾವು ಅನುಭವಿಸಿದೆವೆಂದು ಸಾರಿದರು ಮತ್ತು ಇವುಗಳನ್ನು ಜನರಿಗೆ ಬೋಧಿಸಿದರು. ಆದುದರಿಂದ ಪ್ರಪಂಚದ ಧರ್ಮಗಳೆಲ್ಲವೂ ಪ್ರತ್ಯಕ್ಷ ಅನುಭವವೆಂದು ಸರ್ವೇಸಾಮಾನ್ಯವಾದ ಮತ್ತು ವಜ್ರೋಪಮವಾದ ತಳಹದಿಯ ಮೇಲೆ ನಿಂತಿವೆ ಎನ್ನುವುದು ಸ್ಪಷ್ಟವಾಗಿದೆ.

*(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೨, ಪು.೩೧೨)*

* * *

ಶಾಸ್ತ್ರ ಎಂಬ ಶಬ್ದಕ್ಕೆ ಅನಾದಿಯೂ ಅನಂತವೂ ಆದ ವೇದಗಳು ಎಂದು ಅರ್ಥ. ಧಾರ್ಮಿಕ ಕರ್ತವ್ಯಗಳ ವಿಷಯದಲ್ಲಿ ವೇದಗಳೇ ಪ್ರಮಾಣ. ಪುರಾಣಾದಿ ಇತರ ಧಾರ್ಮಿಕ ಗ್ರಂಥಗಳನ್ನು ಸ್ಮೃತಿ ಎಂದು ಕರೆಯುತ್ತಾರೆ. ಸ್ಮೃತಿಯು ಎಲ್ಲಿಯವರೆಗೆ ವೇದಗಳಿಗೆ ವಿರೋಧವಾಗದೆ ಅವನ್ನು ಅನುಸರಿಸುವುದೋ ಅಲ್ಲಿಯವರೆಗೆ ಮಾತ್ರ ಅದು ಪ್ರಮಾಣ.

ಸತ್ಯದಲ್ಲಿ ಎರಡು ವಿಧಗಳುಂಟು. ಒಂದನೆಯದು ಮಾನವನ ಸಾಧಾರಣ ಇಂದ್ರಿಯಗಳಿಗೆ ಗ್ರಾಹ್ಯವಾದುದು ಮತ್ತು ಇಂದ್ರಿಯಜ್ಞಾನವನ್ನು ಆಧರಿಸಿದ ತರ್ಕವನ್ನು ಅವಲಂಬಿಸಿದುದು. ಎರಡನೆಯದು ಸೂಕ್ಷ್ಮವಾದ ಯೋಗಶಕ್ತಿಯಿಂದ ಗ್ರಾಹ್ಯವಾದುದು. ಒಂದನೆಯದರ ಸಹಾಯದಿಂದ ಸಂಗ್ರಹಿಸಲಾದ ಜ್ಞಾನವನ್ನು ವಿಜ್ಞಾನ ಎಂದು ಕರೆಯುತ್ತೇವೆ. ಎರಡನೆಯದರ ಸಹಾಯದಿಂದ ವೇದ್ಯವಾದ ಜ್ಞಾನವನ್ನು ವೇದಗಳು ಎಂದು ಕರೆಯುತ್ತೇವೆ. ವೇದಗಳೆಂದು ಕರೆಯಲ್ಪಡುವ, ಅನಾದಿಯೂ ಅನಂತವೂ ಆದ ಇಂದ್ರಿಯಾತೀತ ಸತ್ಯಗಳು ಅನವರತವೂ ಅಸ್ತಿತ್ವದಲ್ಲಿದೆ. ಈ ಸತ್ಯಗಳ ಸಹಾಯದಿಂದಲೇ ಸ್ವಯಂ ಸೃಷ್ಟಿಕರ್ತನು ಜಗತ್ತಿನ ಸೃಷ್ಟಿ, ಸ್ಥಿತಿ, ಪ್ರಳಯ ಕಾರ್ಯಗಳನ್ನು ನಡೆಸುತ್ತಿದ್ದಾನೆ. ಈ ಅತೀಂದ್ರಿಯ ಶಕ್ತಿ ಯಾವ ವ್ಯಕ್ತಿಯಲ್ಲಿ ಅಭಿವ್ಯಕ್ತವಾಗುವುದೋ ಅವನಿಗೆ ಋಷಿ ಎಂದು ಹೆಸರು; ಮತ್ತು ಈ ಶಕ್ತಿಯ ಸಹಾಯದಿಂದ ಅವನು ಯಾವ ಅಲೌಕಿಕ ಸತ್ಯಗಳನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವನೋ ಆ ಸತ್ಯಗಳಿಗೆ ವೇದಗಳು ಎಂದು ಹೆಸರು.

ಈ ಋಷಿತ್ವವೇ, ವೇದಗಳ ಇಂದ್ರಿಯಾತೀತ ಜ್ಞಾನಶಕ್ತಿಯೇ ನಿಜವಾದ ಧರ್ಮ. ಸಾಧಕನ ಜೀವನದಲ್ಲಿ ಇದು ಎಲ್ಲಿಯವರೆಗೆ ವ್ಯಕ್ತವಾಗುವುದಿಲ್ಲವೋ, ಎಲ್ಲಿಯವರೆಗೆ ಅವನಿಗೆ ಧರ್ಮ ಎಂಬುದು ಕೇವಲ ಪೊಳ್ಳು ಮಾತಾಗಿರುತ್ತದೆಯೋ, ಅಲ್ಲಿಯವರೆಗೆ ಧರ್ಮರಾಜ್ಯದ ಮೊದಲ ಮೆಟ್ಟಲಿನ ಮೇಲೆಯೂ ಕೂಡ ಆತನು ಕಾಲಿಟ್ಟಿಲ್ಲ ಎಂದು ಹೇಳಬಹುದು.

ವೇದಪ್ರಾಮಾಣ್ಯವು ಎಲ್ಲ ದೇಶ, ಕಾಲ, ವ್ಯಕ್ತಿಗಳಿಗೂ ಅನ್ವಯಿಸುತ್ತದೆ. ಅಂದರೆ ಅವುಗಳು ಯಾವುದೇ ಪ್ರತ್ಯೇಕ ದೇಶ, ಕಾಲ, ಅಥವಾ ವ್ಯಕ್ತಿಗೆ ಸೀಮಿತವಾದುವಲ್ಲ.

ವಿಶ್ವಧರ್ಮದ ಏಕೈಕ ವ್ಯಾಖ್ಯಾನವೆಂದರೆ ವೇದಗಳು.

ಇಂದ್ರಿಯಾತೀತ ಸತ್ಯಗಳ ದರ್ಶನವು ಪುರಾಣ, ಇತಿಹಾಸ ಮತ್ತು ಇತರ ಜನಾಂಗಗಳ ಧಾರ್ಮಿಕ ಗ್ರಂಥಗಳಲ್ಲಿ ಸ್ವಲ್ಪ ಮಟ್ಟಿಗೆ ಉಕ್ತವಾಗಿದ್ದರೂ, ವೇದಗಳೇ ಎಲ್ಲಕ್ಕಿಂತಲೂ ಪುರಾತನವೂ,